**ಕನ್ನಡ ಅನುಷ್ಠಾನ ವರ್ಷ-2009.**

**ಕರ್ನಾಟಕ ಸರ್ಕಾರ**

(ಕಂದಾಯ ಇಲಾಖೆ)

ನಂ: ಸಿಬ್ಬಂದಿ(1) ವಹಿ- 52: 2009-10.

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾವೇರಿ, ದಿನಾಂಕ:30-11-2009

**ಅಧಿಸೂಚನೆ**

**ವಿಷಯ:-** ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ಕುರಿತು.

**ಉಲ್ಲೇಖ:-** 1. ಸರ್ಕಾರದ ಅಧಿಸೂಚನೆ ನಂ:ಆರ್‌ಡಿ: 299: ಬಿಎಸ್‌ಸಿ: 2006: ದಿನಾಂಕ: 3-2-2009, 24-7-2009 ಮತ್ತು 8-9-2009.
2. ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿ: 26-9-2009 ಹಾಗೂ 30-9-2009.

** ** **

ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ 70 ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ ಕುರಿತು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 30-11-2009 ರಂದು ನಡೆದ ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ ಕುರಿತು ನಡೆದ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಅಂಗವಿಕಲ 4 ಅಭ್ಯರ್ಥಿಗಳನ್ನು ಸಾಮಾನ್ಯ ವರ್ಗ ಎಂದು ಉಲ್ಲೇಖ (2)ರ ಕೆಳಗೆ ಅಧಿಸೂಚಿಸಲಾಗಿದ್ದನ್ನು ಮಾರ್ಪಡಿಸಿ, ಸದರ ಹುದ್ದೆಗಳನ್ನು ಇತರೆ ಅಭ್ಯರ್ಥಿಗಳಿಗೆ 20 ಬಿಂದುಗಳ ರೋಷ್ಟರ ಪ್ರಕಾರ (ದಿನಾಂಕ: 4-1-2008ರ ಆದೇಶ) ಅರ್ಹ ವರ್ಗಗಳಿಗೆ ಹಂಚಿಕೆ ಮಾಡಬೇಕೆಂದು ತೀರ್ಮಾನಿಸಿ, 4 ಸಾಮಾನ್ಯ ಹುದ್ದೆಗಳ ಪೈಕಿ, 2-ಸಾಮಾನ್ಯ, 1-ಪರಿಶಿಷ್ಟ ಜಾತಿ ಹಾಗೂ 1-2ಎ ವರ್ಗಕ್ಕೆ ಕಾಯ್ದಿರಿಸಬೇಕೆಂದು ಹಾಗೂ ಈ ಬಗ್ಗೆ ತಿದ್ದುಪಡಿ ಅಧಿಸೂಚನೆ ಹೊರಡಿಸಬೇಕೆಂದು ತೀರ್ಮಾನಿಸಿದರನ್ವಯ ಅಂಗವಿಕಲ ಅಭ್ಯರ್ಥಿಗಳನ್ನು ಪರಿಶಿಷ್ಟ ಜಾತಿ-1, 2ಎ ಅಭ್ಯರ್ಥಿ-1, ಸಾಮಾನ್ಯ ವರ್ಗ-2, ಎಂದು ವಿಂಗಡಿಸಿ ಈ ಮೂಲಕ ಅಧಿಸೂಚನೆ ಹೊರಡಿಸಲಾಗಿದೆ.

ಸಹಿ/-
ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು ಹಾವೇರಿ.

**ಪ್ರತಿ ಗೌರವಪೂರ್ವಕ ಸಲ್ಲಿಸಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಕಂದಾಯ ಇಲಾಖೆ,ಬಹು ಮಹಡಿಗಳ ಕಟ್ಟಡ, ಬೆಂಗಳೂರು
2. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ.

**ಪ್ರತಿ ಅಭಿನಂದನೆಗಳೊಂದಿಗೆ ಸೂಕ್ತ ಕ್ರಮಕ್ಕೆ:**

1. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಹೊರವಲಯ ಮುದ್ರಣಾಲಯ, 8ನೇ ಮೈಲಿ, ಮೈಸೂರ ರಸ್ತೆ, ಆರ್.ವ್ಹಿ.ಕಾಲೇಜ ಪೋಸ್ಟ್, ಬೆಂಗಳೂರು-58 ಇವರಿಗೆ ಈ ಅಧಿಸೂಚನೆಯನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವ ಹಾಗೂ ಪ್ರಕಟಿತ ಅಧಿಸೂಚನೆಯ ಪ್ರತಿಗಳನ್ನು ಈ ಕಛೇರಿಗೆ ಕಳಿಸಲು ಕೋರಿದೆ.
2. ಉಪ ವಿಭಾಗಾಧಿಕಾರಿಗಳು, ಹಾವೇರಿ/ ಸವಣೂರ ಇವರಿಗೆ ಕಛೇರಿ ಸೂಚನಾ ಫಲಕಕ್ಕೆ ಪ್ರಕಟಿಸಿ ವರದಿ ಸಲ್ಲಿಸುವದು.
3. ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ, ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಿಸಿ, ಪ್ರಕಟಿಸಿದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ವಾರ್ತಾಧಿಕಾರಿಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ, ಹಾವೇರಿ ಇವರಿಗೆ ತಿಳಿಸುತ್ತಾ, ಇದನ್ನು ದಿನ ಪತ್ರಿಕೆಗಳಲ್ಲಿ ಸುದ್ದಿ ರೂಪದಲ್ಲಿ ಪ್ರಕಟಿಸಲು ಕ್ರಮ ಜರುಗಿಸಲು ಕೋರಿದೆ.
5. ಕಛೇರಿಯ ಸೂಚನಾ ಫಲಕಕ್ಕೆ.

(signature) 30/11/09

ಕಾರ್ಯದರ್ಶಿಗಳು
ಆಯ್ಕೆ ಪ್ರಾಧಿಕಾರ ಹಾಗೂ
ಅಪರ ಜಿಲ್ಲಾಧಿಕಾರಿಗಳು ಹಾವೇರಿ.

V.A Recruitment\CR-52.